# ಯಜ್ಞದೃಷ್ಟಿ

### ಕಾಮ್ಯಕರ್ಮ

ಯಜ್ಞಾರ್ಥಾತ್ ಕರ್ಮಣೋ-ऽನ್ಯತ್ರ ಲೋಕೋಽಯಂ ಕರ್ಮಬಂಧನಃ | —'ಯಜ್ಞಕ್ಕಾಗಿಯೇ ಕರ್ಮಗಳಿರುವುದು. ಈ ಯಜ್ಞಕ್ಕಾಗಿ ಮಾಡದ ಕರ್ಮ ಬಂಧನಕ್ಕೆ ಕಾರಣವಾಗುತ್ತದೆ' ಎಂದು ಶ್ರೀಕೃಷ್ಣ ಹೇಳುತ್ತಾನೆ. ವೈದಿಕ ಕಾಲದಲ್ಲಿ ಯಜ್ಞವೆಂದರೆ ದೇವತೆಗಳನ್ನುದ್ದೇಶಿಸಿ ಅಗ್ನಿಯಲ್ಲಿ ವಿವಿಧ ಆಹುತಿಗಳನ್ನು ನೀಡುವ ವಿವಿಧ ಬಗೆಯ ವೈದಿಕ ಕ್ರಿಯೆಗಳಾಗಿದ್ದವು. ಅತ್ಯಂತ ಸಂಕೀರ್ಣವಾದ, ವಿಸ್ತಾರವಾದ ಯಜ್ಞಗಳಿದ್ದವು. ಈ ಯಜ್ಞಗಳು ಅನೇಕ ಉದ್ದೇಶಗಳನ್ನು ಹೊಂದಿರುತ್ತಿದ್ದವು: ಸ್ವರ್ಗ-ಪ್ರಾಪ್ತಿ, ಸಂತಾನೋತ್ಪತ್ತಿ, ಜಗತ್ತಿನ ಕಲ್ಯಾಣ ಇತ್ಯಾದಿ. ಇವೆಲ್ಲವೂ ಕಾಮ್ಯಕರ್ಮಗಳ ಗುಂಪಿಗೆ ಸೇರುತ್ತವೆ.

### ನಮ್ಮ ಜೀವನ ಪ್ರಕೃತಿಯ ಕೊಡುಗೆ

ವೇದಗಳಲ್ಲಿ ಬರುವ ವಿವಿಧ ದೇವತೆಗಳೆಂದರೆ ವಿವಿಧ ಪ್ರಾಕೃತಿಕ ಶಕ್ತಿಗಳು, ಅಂದರೆ ಅಗ್ನಿ, ಸೂರ್ಯ, ವಾಯು, ಇಂದ್ರ, ವರುಣ ಇತ್ಯಾದಿ. ಇವರೆಲ್ಲರೂ ವ್ಯಕ್ತಿಭಾವವನ್ನು ಪಡೆದ ಪ್ರಾಕೃತಿಕ ಶಕ್ತಿಗಳು. ಈಗ ಯಾರೂ ಈ ದೇವತೆಗಳನ್ನು ಪೂಜಿಸುವುದಿಲ್ಲ. ಯಜ್ಞಯಾಗಾದಿಗಳೆಲ್ಲ ಗತಕಾಲದ ಪಳೆಯುಳಿಕೆಗಳಾಗಿವೆ. (ಇತ್ತೀಚೆಗೆ ಯಜ್ಞ ಹೋಮಾದಿಗಳಿಗೆ ವೈಜ್ಞಾನಿಕ ವಿವರಣೆಯನ್ನು ನೀಡುವ ಪ್ರಯತ್ನ ನಡೆಯುತ್ತಿದೆ ಮತ್ತು ಅವುಗಳಿಗೆ ಪುನಶ್ಚೇತನ ನೀಡಲಾಗುತ್ತಿದೆ.) ಆದರೆ ಪ್ರಕೃತಿಯನ್ನು ನಾವು ಮರೆಯುವಂತಿಲ್ಲ, ಕಡೆಗಣಿಸುವಂತಿಲ್ಲ. ನಾವೆಲ್ಲರೂ ಪ್ರಕೃತಿಮಾತೆಯ ಮಕ್ಕಳು. ನಮ್ಮ ಬದುಕು ಸಂಪೂರ್ಣವಾಗಿ ಪ್ರಕೃತಿಯನ್ನು ಅವಲಂಬಿಸಿದೆ. ನಾವು ಬೆಳಕನ್ನೂ ಆಹಾರವನ್ನೂ ಪಡೆಯುವುದು ಸೂರ್ಯನಿಂದ; ವಾಯುವಿನಿಂದ ನಾವು ಉಸಿರಾಡುತ್ತೇವೆ; ನೀರಿಲ್ಲದೆ ನಾವು ಬದುಕಲಾರೆವು; ಕೇವಲ ಮಾದಕ ದ್ರವ್ಯವನ್ನೇ ಕುಡಿದುಕೊಂಡಿರುತ್ತೇನೆಂದರೂ ಅದರಲ್ಲಿ ನೀರಿನ ಅಂಶವೇ ಹೆಚ್ಚಿರುತ್ತದೆ; ಅಗ್ನಿಯಿಲ್ಲದೆ ನಮ್ಮ ಬೇಳೆಯೇ ಬೇಯುವುದಿಲ್ಲ; ಮಳೆಯಿಲ್ಲದಿದ್ದರೆ ಬೆಳೆಯೇ ಇಲ್ಲ. ಇಷ್ಟೇಕೆ, ನಮ್ಮ ದೇಹವೇ ಪ್ರಕೃತಿಯಿಂದಾದುದು, ಹಾಗೂ ಪ್ರಕೃತಿಯಿಂದ ಪೋಷಿತವಾಗುತ್ತಿರುವುದು. ನಮ್ಮ ಸ್ಥೂಲದೇಹದಿಂದ ಹಿಡಿದು ಸೂಕ್ಷ್ಮಾತಿಸೂಕ್ಷ್ಮ ಬುದ್ಧಿಯವರೆಗೆ ಎಲ್ಲವೂ ಪ್ರಕೃತಿಯ ಉತ್ಪನ್ನಗಳು. ಪ್ರಕೃತಿ ನಿರ್ಮಿಸಿಕೊಟ್ಟ ಈ ಮನೆಯಲ್ಲಿ, ಬಾಡಿಗೆ ಕೊಡದೆ ಇರುವುದು ಮಾತ್ರವಲ್ಲದೆ, ಪ್ರಕೃತಿಯಿಂದಲೆ ಹೆಚ್ಚು ಹೆಚ್ಚು ದೋಚುತ್ತ ನಾವು ವಾಸಿಸುತ್ತಿದ್ದೇವೆ. ನಮಗೆ ಮನೆ ಕೊಟ್ಟವನನ್ನೇ ಲೂಟಿ ಮಾಡುತ್ತಿದ್ದೇವೆ. ನಮ್ಮ ನಿಜವಾದ ನೆಲೆಯನ್ನೇ, ಮೂಲವನ್ನೇ ನಾವು ನಾಶ ಮಾಡುತ್ತಿದ್ದೇವೆ—ಇದು ನಾವು ನಿಂತುಕೊಂಡಿರುವ ಮರದ ಕೊಂಬೆಯನ್ನೇ ಕಡಿಯುತ್ತಿರುವಂತೆ.

### ನಿಜವಾದ ಯಜ್ಞ

ಆದ್ದರಿಂದ ಈಗ ಯಜ್ಞವೆಂದರೆ ಪ್ರಕೃತಿಯನ್ನು ಪೂಜಿಸುವುದು–ಅಗ್ನಿಯ ಮೂಲಕವಲ್ಲ, ಹೂವು ಗಂಧಾದಿಗಳ ಮೂಲಕವಲ್ಲ. ನಮ್ಮ ವಾತಾವರಣವನ್ನು ಶುದ್ಧವಾಗಿ ಡುವುದು ಯಜ್ಞ, ನೀರನ್ನು ಶುದ್ಧವಾಗಿಡುವುದು ಯಜ್ಞ, ಗಾಳಿಯನ್ನು ಶುದ್ಧವಾಗಿಡುವುದು ಯಜ್ಞ, ಗಿಡಮರಗಳನ್ನು ಬೆಳೆಸುವುದು ಯಜ್ಞ, ನಮ್ಮ ಲೋಭವನ್ನು ಸೀಮಿತಗೊಳಿಸಿ ಪ್ರಕೃತಿಯಿಂದ ಆವಶ್ಯಕವಾದಷ್ಟನ್ನು ಮಾತ್ರ ಸ್ವೀಕರಿಸುವುದು ಯಜ್ಞ. ಈ ಯಜ್ಞದೃಷ್ಟಿ ನಮ್ಮಲ್ಲಿ ಬರಬೇಕಾದರೆ ನಮ್ಮ ಸ್ವಾರ್ಥತೆಯನ್ನು ಬಿಡಬೇಕಾಗುತ್ತದೆ. ಸಾಮಾಜಿಕ ದೃಷ್ಟಿ, ಮಾನವೀಯ ದೃಷ್ಟಿಯನ್ನು ನಾವು ಬೆಳಸಿಕೊಳ್ಳಬೇಕಾಗುತ್ತದೆ. ನಾನು ಬದುಕಬೇಕಾದರೆ ಸಮಾಜವು ಬದುಕಿರಬೇಕು, ಇಡೀ ಮಾನವಕೋಟಿಯು ಬದುಕಿರಬೇಕು. ನನ್ನ ಬದುಕು ಎಲ್ಲರ ಬದುಕನ್ನು, ಒಟ್ಟು ಪ್ರಕೃತಿಯ ಬದುಕನ್ನು ಅವಲಂಬಿಸಿದೆ. ಇದು ಎಲ್ಲರಿಗೂ ಅತ್ಯಂತ ಸ್ಪಷ್ಟವಾಗಿ ತಿಳಿದು ಬರುವುದಾದರೂ, ಯಾರೂ ಇದಕ್ಕನುಗುಣವಾಗಿ ಬಾಳುತ್ತಿರುವಂತೆ ಕಂಡು ಬರುವುದಿಲ್ಲ. ಪರಹಿತದಲ್ಲಿ ಸ್ವಹಿತವನ್ನೂ ಸ್ವಹಿತದಲ್ಲಿ ಪರಹಿತವನ್ನೂ ಕಾಣುವುದು, ಸ್ವಹಿತ ಮತ್ತು ಪರಹಿತ ಎರಡನ್ನೂ ಸಮನ್ವಯಗೊಳಿಸುವುದು ಅತ್ಯಂತ ಆವಶ್ಯಕವಾಗಿದೆ.

ಪರಹಿತದಲ್ಲಿ ಸ್ವಹಿತವನ್ನೂ ಸ್ವಹಿತದಲ್ಲಿ ಪರಹಿತವನ್ನೂ ಕಾಣುವುದು, ಸ್ವಹಿತ ಮತ್ತು ಪರಹಿತ ಎರಡನ್ನೂ ಸಮನ್ವಯಗೊಳಿಸುವುದು ಅತ್ಯಂತ ಆವಶ್ಯಕವಾಗಿದೆ.

### ಪ್ರತ್ಯೇಕತೆ ಇಲ್ಲ

ಈ ಜಗತ್ತಿನಲ್ಲಿ ಪ್ರತ್ಯೇಕತೆ ಎಂಬುದಿಲ್ಲ—ಯಾವುದೇ ವಸ್ತುವಿಗೂ ಅದರದೇ ಆದ ಪ್ರತ್ಯೇಕ ಅಸ್ತಿತ್ವವಿದೆ ಎಂದು ಹೇಳಲಾಗುವುದಿಲ್ಲ. ಎಲ್ಲವೂ ಒಟ್ಟು ವಿಶ್ವದ ಅಸ್ತಿತ್ವದ, ಸಮಷ್ಟಿಯ ಅಂಶಗಳು. ವ್ಯಷ್ಟಿಸಮಷ್ಟಿಗಳೆರಡನ್ನು ಬೇರ್ಪಡಿಸಲಾಗುವುದಿಲ್ಲ. ಮೇಲುನೋಟಕ್ಕೆ ಎಲ್ಲ ಪ್ರತ್ಯೇಕ ಪ್ರತ್ಯೇಕವಾಗಿ ಕಂಡರೂ ಇಡೀ ಜಗತ್ತು ಒಂದು ನಿರಂತರ ಅಸ್ತಿತ್ವ. ಒಂದು ಕಲ್ಲು ಪ್ರತ್ಯೇಕವಾಗಿ ಕಾಣಬಹುದು, ಒಂದು ಮನೆ ಪ್ರತ್ಯೇಕವಾಗಿ ಕಾಣಬಹುದು, ಒಂದು ಮರ ಪ್ರತ್ಯೇಕವಾಗಿ ಕಾಣಬಹುದು. ಇವೆಲ್ಲದರ ನಡುವೆ ಎಷ್ಟೇ ದೇಶಾಂತರವಿದ್ದರೂ ಆ ಅಂತರವೂ ವಸ್ತುಗಳಿಂದ ತುಂಬಿರುವುದು. ಅಷ್ಟು ಮಾತ್ರವಲ್ಲದೆ ಎಲ್ಲ ವಸ್ತುಗಳ ನಡುವೆ ಪರಸ್ಪರ ಕಣಗಳ ವಿನಿಮಯ ನಡೆದೇ ಇರುತ್ತದೆ. ಕಲ್ಲು, ಮನೆ, ಮರ, ಅವುಗಳ ನಡುವಿನ ಅಂತರ ಇವೆಲ್ಲವೂ ನಿರಂತರ ಭೌತ ಅಸ್ತಿತ್ವ. ಯಾವ

ವಸ್ತುವನ್ನೂ ಎಲ್ಲ ವಸ್ತುಗಳಿಂದಲೂ ಪ್ರತ್ಯೇಕವಾಗಿ ನೋಡಲಾಗುವುದಿಲ್ಲ.

ಇದು ವ್ಯಕ್ತಿಗಳಿಗೂ ಅನ್ವಯಿಸುತ್ತದೆ. ನನ್ನ ದೇಹ, ನಿಮ್ಮ ದೇಹ, ಅವನ ದೇಹ ಎಂದು ಪ್ರತ್ಯೇಕ ದೇಹಗಳಿಲ್ಲ. ಸ್ವಾಮಿ ವಿವೇಕಾನಂದರು ಹೇಳುವಂತೆ, ಈ ದೇಹಗಳೆಲ್ಲವೂ ವಿಶ್ವವ್ಯಾಪಿ ಭೌತ ಸಾಗರದ ಕಿರು ಅಲೆಗಳು. ಮಾನಸಿಕವಾಗಿಯೂ ನಮಗೆ ಪ್ರತ್ಯೇಕ ಅಸ್ತಿತ್ವವಿಲ್ಲ. ನಮ್ಮ ಮನಸ್ಸುಗಳು ವಿಶ್ವಮನಸ್ಸಿನ ವಿವಿಧ ಅಂಶಗಳು. ಇದರಿಂದಾಗಿಯೇ ಆಲೋಚನಾ ಸಂವಹನ ಮತ್ತು ಒಬ್ಬರ ಮೇಲೆ ಒಬ್ಬರ ಆಲೋಚನಾ ಪ್ರಭಾವ ಇವು ಸಾಧ್ಯವಾಗುವಂತಹುದು. *The Book of Mirdad* ಎಂಬ ಗ್ರಂಥದಲ್ಲಿ ಹೀಗೆ ಹೇಳಿದೆ:

'ನಾನು ನಿನಗೆ ಹೇಳುತ್ತೇನೆ, ನಿನ್ನ ಮಾಂಸ ಎಲುಬುಗಳು ಕೂಡ ನಿನಗೆ ಮಾತ್ರ ಸೇರಿದವುಗಳಲ್ಲ. ಭೂಮ್ಯಾಕಾಶಗಳ ಮಾಂಸದ ಮಡುವಿನಿಂದ ಅವು ಬಂದವುಗಳು, ಮತ್ತು ಕೊನೆಗೆ ಅದರಲ್ಲಿಯೇ ಲಯ ವಾಗುತ್ತವೆ. ನಿನ್ನಂತೆಯೇ ಅಸಂಖ್ಯ ಜನರು ಆ ಮಡುವಿನಲ್ಲಿ ಕೈಹಾಕುತ್ತಾರೆ.... ಹಾಗೆಯೇ ನಿನ್ನ ಆಲೋಚನೆಗಳೂ ಕೇವಲ ನಿನ್ನವುಗಳಲ್ಲ. ವಿಶ್ವ ಆಲೋಚನಾ ಸಾಗರದ ಅಂಶಗಳವು. ಆಲೋಚಿಸುವವರೆಲ್ಲರೂ ಆ ಸಾಗರದಿಂದಲೇ ಅವನ್ನು ಪಡೆಯುತ್ತಾರೆ. (ಮಿಖೈಲ್ ನೈಮಿ, ಪು.೪೬)

ಆಧ್ಯಾತ್ಮಿಕವಾಗಿಯಂತೂ ನಮಗೆ ಪ್ರತ್ಯೇಕ ಅಸ್ತಿತ್ವವಿಲ್ಲ. ನಾವೆಲ್ಲ ವಿಶ್ವಾತ್ಮನ ವಿವಿಧ ಅಂಶಗಳು—**ಮಮೈವಾಂಶೋ ಜೀವಲೋಕೇ ಜೀವಭೂತಃ ಸನಾತನಃ।** 'ನನ್ನ (ಪರಮಾತ್ಮನ) ಅಂಶವೇ ಈ ಜೀವಲೋಕದಲ್ಲಿ ಸನಾತನವಾದ ಜೀವರೂಪದಲ್ಲಿ ಇರುವಂತಹುದು.' ನಮಗಾರಿಗೂ ಭೌತಿಕವಾಗಿಯಾಗಲಿ, ಮಾನಸಿಕವಾಗಿಯಾಗಲಿ, ಆಧ್ಯಾತ್ಮಿಕವಾಗಿಯಾಗಲಿ ಪ್ರತ್ಯೇಕ ಅಸ್ತಿತ್ವವಿಲ್ಲದಿರುವುದರಿಂದ ನಮ್ಮ ಜೀವನ ವಿಶ್ವಜೀವನದೊಂದಿಗೆ ಸಂಪೂರ್ಣ ಒಂದಾಗಿರುವುದು. ಸ್ವಾಮಿ ವಿವೇಕಾನಂದರು ಹೇಳುವಂತೆ, 'ವ್ಯಕ್ತಿಯ ಜೀವನವು ಪೂರ್ಣದ ಜೀವನವನ್ನು ಅವಲಂಬಿಸಿದೆ, ವ್ಯಕ್ತಿಯ ಸುಖವು ಪೂರ್ಣದ ಸುಖವನ್ನು ಅವಲಂಬಿಸಿದೆ; ಪೂರ್ಣತೆಯನ್ನು ಹೊರತಾಗಿ ವ್ಯಕ್ತಿಯ ಅಸ್ತಿತ್ವವನ್ನು ಕಲ್ಪಿಸಲಾಗುವುದಿಲ್ಲ. ಇದೊಂದು ಸನಾತನ ಸತ್ಯ, ಇಡೀ ಜಗತ್ತು ನಿರ್ಮಿತವಾಗಿರುವುದೇ ಈ ಶಿಲಾಪ್ರಸ್ತರದ ಮೇಲೆ.' (ಕೃತಿಶ್ರೇಣಿ.೪.೪೮೫)

ನಮ್ಮ ಎಲ್ಲ ಕೆಲಸಗಳೂ ವಿಶ್ವಯಜ್ಞದ ವಿವಿಧ ಭಾಗಗಳು—ಇವಾವುವೂ ನಮ್ಮದಲ್ಲ. ಈ ಯಜ್ಞದೃಷ್ಟಿಯಿಂದ ಜೀವನ ನಡೆಸುವುದು, ನಮ್ಮ ಕರ್ಮಗಳನ್ನು ನೆರವೇರಿಸುವುದು—ಇದೇ ಕರ್ಮಯೋಗ.

## ನಾನು ಮಾತ್ರ ಸುಖವಾಗಿರಲಾರೆ

ಯಾವ ವ್ಯಕ್ತಿಯೂ ತಾನು ಮಾತ್ರ ಸುಖವಾಗಿರುತ್ತೇನೆ, ಇತರರು ಅಥವಾ ಸಮಾಜ ಹೇಗಾದರೂ ಇರಲಿ ಎಂದು ಭಾವಿಸುವಂತಿಲ್ಲ. ವ್ಯಕ್ತಿಯ ಸುಖ ಒಟ್ಟು ಸಮಾಜದ ಸುಖವನ್ನು ಅವಲಂಬಿಸಿರುತ್ತದೆ. ದೇಹದ ಯಾವುದೇ ಒಂದು ಭಾಗದ ಆರೋಗ್ಯವು ಒಟ್ಟು ದೇಹದ ಆರೋಗ್ಯವನ್ನು ಅವಲಂಬಿಸಿರುತ್ತದೆ. ಉದಾರಹಣೆಗೆ ತೋಳು ಮಾತ್ರ ಬಲವಾಗಿದ್ದು ಇಡೀ ದೇಹ ಸಣಕಲಾಗಿದ್ದರೆ ಅದೊಂದು ಅಸ್ವಾಭಾವಿಕ ಸ್ಥಿತಿ. ಹಾಗೆಯೇ ಸಮಾಜದಲ್ಲಿ ಒಂದು ವರ್ಗದವರು ಮಾತ್ರ ಸುಖ ಜೀವನವನ್ನು ನಡೆಸುತ್ತಿದ್ದು ಉಳಿದವರೆಲ್ಲ ಸಂಕಟ ಪಡುತ್ತಿದ್ದರೆ ಅದನ್ನು ರೋಗಗ್ರಸ್ತ ಸಮಾಜವೆಂದು ಕರೆಯಬೇಕಾಗುತ್ತದೆ. ಅಂತಹ ಸ್ಥಿತಿಯಲ್ಲಿ ಆ ಒಂದು ವರ್ಗದವರೂ ಬಹಳಕಾಲ ಸುಖದಿಂದಿರಲಾರು. ಆದ್ದರಿಂದ ಕೇವಲ ವೈಯಕ್ತಿಕ ಸುಖ ಎಂಬುದೂ ಇಲ್ಲ.

## ಕರ್ಮ ನಮ್ಮದಲ್ಲ

ಆದ್ದರಿಂದ ನಮ್ಮ ಯಾವ ಕಾರ್ಯವೂ ನಿಜವಾಗಿಯೂ ನಮ್ಮದಲ್ಲ. ಇದು ವಿಶ್ವಕ್ರಿಯೆಯ, ವಿಶ್ವಯಜ್ಞದ ಅಂಶ. ನಾವು ಮಾಡುವ ಯಾವ ಕಾರ್ಯವೂ ನಮ್ಮದಲ್ಲ, ಆದ್ದರಿಂದ ಅದರ ಫಲವೂ ನಮ್ಮದಲ್ಲ. ಕರ್ಮ ಮಾಡುವುದೊಂದೇ ನಮ್ಮ ಪಾಲಿನದು, ಅದರ ಫಲ ನಮ್ಮದಲ್ಲ. ಆದ್ದರಿಂದಲೇ ಶ್ರೀಕೃಷ್ಣ ಹೇಳುತ್ತಾನೆ: **ಕರ್ಮಣ್ಯೇವಾಽಧಿಕಾರಸ್ತೇ ಮಾ ಫಲೇಷು ಕದಾಚನ** —'ಕರ್ಮ ಮಾಡುವುದರಲ್ಲಿ ಮಾತ್ರ ನಿನಗೆ ಅಧಿಕಾರ, ಅದರ ಫಲದಲ್ಲಲ್ಲ.' ಒಂದು ಕಾರು ತಯಾರಿಸುವ ಕಾರ್ಖಾನೆ ಇದ್ದರೆ ಅದರಲ್ಲಿ ಹಲವು ವಿಭಾಗಗಳಿರುತ್ತವೆ. ಒಂದೊಂದು ವಿಭಾಗವೂ ಕಾರಿಗೆ ಸಂಬಂಧಪಟ್ಟ ಯಾವುದೊ ಒಂದು ಭಾಗವನ್ನು ನಿರ್ಮಿಸುತ್ತದೆ. ಕಾರ್ಖಾನೆಯ ಯಾವುದೇ ವಿಭಾಗವೂ ತನಗಾಗಿ ಕೆಲಸ ಮಾಡುತ್ತಿಲ್ಲ, ಒಟ್ಟು ಕಾರ್ಖಾನೆಯ ಉದ್ದೇಶವನ್ನು ಪೂರ್ತಿಗೊಳಿಸುತ್ತದೆ. ಹೀಗೆಯೇ ನಮ್ಮ ಎಲ್ಲ ಕೆಲಸಗಳೂ ವಿಶ್ವಯಜ್ಞದ ವಿವಿಧ ಭಾಗಗಳು—ಇವಾವುವೂ ನಮ್ಮದಲ್ಲ.

ನಮ್ಮ ದೇಹದ ಉದಾಹರಣೆಯನ್ನೇ ತೆಗೆದುಕೊಳ್ಳೋಣ. ನಮ್ಮ ದೇಹದಲ್ಲಿ ಅಸಂಖ್ಯ ಅಂಗಾಂಗಳು ಕೆಲಸಮಾಡುತ್ತಿವೆ. ಅವುಗಳ ಕಾರ್ಯಗಳಾವುವೂ ಅವುಗಳದಲ್ಲ, ಅವುಗಳಿಗಾಗಿಯಲ್ಲ–ಒಟ್ಟು ದೇಹಕ್ಕಾಗಿ. ಕಣ್ಣು ನೋಡುವುದು ತನಗಾಗಿಯಲ್ಲ, ಕಿವಿ ತನಗಾಗಿ ಕೇಳುವುದಿಲ್ಲ, ಹೃದಯ ತನಗಾಗಿ ಕೆಲಸ ಮಾಡುತ್ತಿಲ್ಲ. ಇವುಗಳೆಲ್ಲದರ ಕೆಲಸವೂ ವ್ಯಕ್ತಿಗಾಗಿ, ವ್ಯಕ್ತಿಯ ಉದ್ದೇಶಕ್ಕಾಗಿ. ಹಾಗೆಯೆ ವ್ಯಕ್ತಿಯ ಕೆಲಸವೂ ವ್ಯಕ್ತಿಗಾಗಿ ಅಲ್ಲ, ವಿಶ್ವಪುರುಷನಿಗಾಗಿ. ಇಡೀ ವಿಶ್ವವೇ ಅವನು ನಡೆಸುತ್ತಿರುವ ಒಂದು ಮಹಾಯಜ್ಞ. ನಮ್ಮ ಎಲ್ಲ ಕ್ರಿಯೆಗಳೂ ಈ ವಿಶ್ವಯಜ್ಞದ ವಿವಿಧ ಅಂಶಗಳು. ಇದೇ ಯಜ್ಞದೃಷ್ಟಿ. ಈ ಯಜ್ಞದೃಷ್ಟಿಯಿಂದ ಜೀವನ ನಡೆಸುವುದು, ನಮ್ಮ ಕರ್ಮಗಳನ್ನು ನೆರವೇರಿಸುವುದು–ಇದೇ ಕರ್ಮಯೋಗ. ಇಲ್ಲಿ ಸಾಮಾನ್ಯ ಕರ್ಮವು ಆಧ್ಯಾತ್ಮಿಕ ಯೋಗವಾಗುತ್ತದೆ, ನಿಸ್ವಾರ್ಥ ಸೇವೆಯಾಗುತ್ತದೆ. ಇದಲ್ಲದೆ ಫಲಾಪೇಕ್ಷೆಯಿಂದ ಕರ್ಮ ಮಾಡುವವರು ಕ್ಷುದ್ರ ಮತಿಗಳು (**ಕೃಪಣಾಃ ಫಲಹೇತವಃ**)ಎಂದು ಶ್ರೀಕೃಷ್ಣನು ಹೇಳುತ್ತಾನೆ.

## ಯಾವ ವಸ್ತುವೂ ನಮ್ಮದಲ್ಲ

ಹೇಗೆ ನಾವು ಮಾಡುವ ಕೆಲಸಗಳು ನಮ್ಮ ಸ್ವಂತದ್ದಲ್ಲವೋ ನಮ್ಮಲ್ಲಿರುವ ಯಾವ ವಸ್ತುಗಳೂ ನಮ್ಮ ಸ್ವಂತದ್ದಲ್ಲ. ಎಷ್ಟೊ ವಸ್ತುಗಳು ನಮ್ಮಲ್ಲಿ ಸಂಗ್ರಹವಾಗಬಹುದು, ಹಣ ಸಂಗ್ರಹವಾಗಬಹುದು, ಅಧಿಕಾರ ಸಂಗ್ರಹವಾಗಬಹುದು ಮತ್ತು ಜ್ಞಾನ ಸಂಗ್ರಹವಾಗಬಹುದು. ಆದರೆ ಅದು ಪುನಃ ಇತರರಲ್ಲಿ ಹಂಚಿಹೋಗುವುದಕ್ಕೆ, ಕೇವಲ ನಮ್ಮ ಬಳಕೆಗಾಗಿ ಅಲ್ಲ. ನಾನೇ ಬಹಳ ಶ್ರಮಪಟ್ಟು ದುಡಿದು ಹಣವನ್ನಾಗಲಿ, ವಸ್ತುವನ್ನಾಗಲಿ ಅಥವಾ ಅಧಿಕಾರವನ್ನಾಗಲಿ ಸಂಗ್ರಹಿಸಿದ್ದರೂ ಆ ದುಡಿಮೆಯೂ ನನ್ನದಲ್ಲ, ಆ ದುಡಿಮೆಯ ಫಲವೂ ನನ್ನದಲ್ಲ. ಹೃದಯದಲ್ಲಿ ರಕ್ತ ಸಂಗ್ರಹ ವಾಗುವುದು ಅದು ಪುನಃ ದೇಹದ ಬೇರೆ ಬೇರೆ ಭಾಗಗಳಿಗೆ ಹಂಚಿ ಹೋಗುವುದಕ್ಕೆ. ಹೃದಯವು ರಕ್ತ ತನ್ನದೇ ಎಂದು ಹಿಡಿದಿಟ್ಟು ಕೊಂಡರೆ ಅದೇ ನಾಶವಾಗುತ್ತದೆ. ಹಾಗೆಯೇ ತನಗೆ ದೊರೆತಿರುವುದನ್ನು ಇತರರಿಗೆ ಹಂಚದೆ ತಾನೇ ಸಂಗ್ರಹಿಸಿಟ್ಟುಕೊಂಡರೆ ಆ ವ್ಯಕ್ತಿಯೇ ನಾಶವಾಗುತ್ತಾನೆ–ಅಂದರೆ ಔದಾರ್ಯಶೂನ್ಯತೆ, ಸಂಕುಚಿತ ಭಾವ ಮನಶ್ಶಾಂತಿಯನ್ನು ಕೆಡಿಸಿ ವ್ಯಕ್ತಿಯನ್ನು ದುಃಖಿಯನ್ನಾಗಿ ಮಾಡುತ್ತದೆ. ಆದ್ದರಿಂದಲೆ ಸ್ವಾಮಿ ವಿವೇಕಾನಂದರು ಸಂಕೋಚವೇ ಮರಣ ಎಂದಿರುವುದು. ನಾವು ತಿಂದ ಆಹಾರ ಹೊಟ್ಟೆಯಲ್ಲಿಯೇ ಸಂಗ್ರಹವಾಗಿ ಉಳಿದು ಬಿಟ್ಟರೆ ಏನಾಗಬಹುದೆಂಬುದು ಎಲ್ಲರಿಗೂ ತಿಳಿದ ವಿಷಯ. ಅದು ಜೀರ್ಣವಾಗಿ ದೇಹದಾದ್ಯಂತ ಪಸರಿಸಬೇಕು. ನದಿಗೆ ಅಣೆಕಟ್ಟನ್ನು ಹಾಕಿ ನೀರನ್ನು ಸಂಗ್ರಹಿಸುವುದು ಕಾಲುವೆಯ ಮೂಲಕ ಬೇರೆ ಬೇರೆ ಹೊಲಗಳಿಗೆ ಹರಿಸುವುದಕ್ಕಾಗಿ. ಹೀಗೆ ವ್ಯಕ್ತಿಯಲ್ಲಿ ಸಂಗ್ರಹವಾಗುವುದೆಲ್ಲವೂ ಕೇವಲ ಅವನ ಸ್ವಂತಕ್ಕಾಗಿ ಅಲ್ಲ, ಇತರರಿಗೆ ಹಂಚುವುದಕ್ಕಾಗಿ. ಅವನು ಹಾಗೆ ಮಾಡದೆ ಲೋಭದಿಂದ ಸಂಗ್ರಹಿಸುತ್ತ ಹೋದರೆ ಅತ್ಯಂತ ಅತೃಪ್ತಜೀವನ ನಡೆಸಬೇಕಾಗುತ್ತದೆ. ಪ್ರಸಿದ್ಧ ಮನಶ್ಶಾಸ್ತ್ರಜ್ಞ ಎರಿಕ್ ಫ್ರೊಮ್ ಹೇಳುತ್ತಾನೆ: 'ಲೋಭ ಎನ್ನುವುದು ತಳವಿಲ್ಲದ ಒಂದು ಹೊಂಡವಿದ್ದಂತೆ. ಎಷ್ಟು ಅದನ್ನು ತುಂಬಿಸಿದರೂ ಅದು ತುಂಬುವುದೇ ಇಲ್ಲ. ಆಸೆಯನ್ನು ತೃಪ್ತಿಪಡಿಸುವ ಕೊನೆಯಿಲ್ಲದ ಪ್ರಯತ್ನದಲ್ಲಿ, ಕೊನೆಗೂ ತೃಪ್ತಿಕಾಣದೆ ವ್ಯಕ್ತಿಯು ನಿಃಶಕ್ತನಾಗುತ್ತಾನೆ.' (*Escape from Freedom*, p.136)

## ಸಾಮಾಜಿಕ ಆಯಾಮ

ಸಾಮಾಜಿಕ ದೃಷ್ಟಿಯಿಂದಲೂ ನಾವು ಈ ವಿಷಯವನ್ನು ಚಿಂತಿಸಬಹುದು. ನಮ್ಮ ಪ್ರತಿಯೊಂದು ಕರ್ಮಕ್ಕೂ ಸಾಮಾಜಿಕ ಆಯಾಮವೊಂದಿರುತ್ತದೆ. ಯಾವ ಕರ್ಮವೂ ಸಂಪೂರ್ಣ ವೈಯಕ್ತಿಕವಲ್ಲ. ಒಬ್ಬನು ಒಂದು ಆಫೀಸಿನಲ್ಲಿ ಕೆಲಸ ಮಾಡುತ್ತಿದ್ದಾನೆ ಎಂದಿಟ್ಟುಕೊಳ್ಳಿ. ಅವನು ತನ್ನ ಜೀವನೋಪಾಯಕ್ಕಾಗಿ ಕೆಲಸ ಮಾಡುತ್ತಿದ್ದೇನೆ, ಕೇವಲ ಸಂಬಳಕ್ಕಾಗಿ ಮಾಡುತ್ತಿದ್ದೇನೆ ಎಂದು ಭಾವಿಸಬಹುದು, ಅದಕ್ಕನುಗುಣವಾಗಿಯೇ ಅವನು ಕೆಲಸವನ್ನೂ ಮಾಡಬಹುದು. ಆದರೆ ಅವನ ಯೋಗ್ಯತೆಯನ್ನನುಸರಿಸಿ ಅವನ ಕೆಲಸದಿಂದ ಆಫೀಸಿಗೆ ಒಳ್ಳೆಯದು ಅಥವಾ ಕೆಟ್ಟದ್ದು ಆಗಬಹುದು, ಮತ್ತು ಅದರ ಮೂಲಕ ಸಮಾಜದ ಮೇಲೆ ಒಳ್ಳೆಯ ಅಥವಾ ಕೆಟ್ಟ ಪರಿಣಾಮವುಂಟಾಗಬಹುದು. ಒಬ್ಬ ವ್ಯಾಪಾರಿ ಕೇವಲ ತನ್ನ ಲಾಭಕ್ಕಾಗಿಯೇ ವ್ಯಾಪಾರ ಮಾಡುತ್ತಿದ್ದರೂ ಅವನ ವ್ಯಾಪಾರ ಸಮಾಜದ ಮೇಲೆ ಏನಾದರೊಂದು ಪರಿಣಾಮವನ್ನು ಉಂಟುಮಾಡುತ್ತಿರುತ್ತದೆ. ಆದ್ದರಿಂದ ಯಾವ ಕೆಲಸವೂ ಸಂಪೂರ್ಣ ವೈಯಕ್ತಿಕವಲ್ಲ.

ಈ ಅರಿವು ನಮ್ಮಲ್ಲಿ ಒಂದು ಸಾಮಾಜಿಕ ಪ್ರಜ್ಞೆಯನ್ನು ಉಂಟುಮಾಡುತ್ತದೆ, ನಮ್ಮ ಸಾಮಾಜಿಕ ಜವಾಬ್ದಾರಿಯನ್ನು ಹೆಚ್ಚಿಸುತ್ತದೆ. ಶ್ರೀಕೃಷ್ಣನು ಹೇಳುವಂತೆ, ಭುಂಜತೇ ತೇ ತ್ವಘಂ ಪಾಪಾ ಯೇ ಪಚಂತ್ಯಾತ್ಮಕಾರಣಾತ್| 'ಯಾರು ತಮಗಾಗಿಯೇ ಅಡಿಗೆಯನ್ನು ಮಾಡುತ್ತಾರೊ ಅವರು ಪಾಪವನ್ನೇ ಉಣ್ಣುತ್ತಾರೆ.' ಈ ಮಾತು ಕೇವಲ ಅಡಿಗೆಗೆ ಮಾತ್ರ ಅನ್ವಯಿಸುವುದಿಲ್ಲ, ನಾವು ಮಾಡುವ ಎಲ್ಲ ಕರ್ಮಕ್ಕೂ ಅನ್ವಯಿಸುತ್ತದೆ. ಈ ಭಾವನೆ ನಮ್ಮನ್ನು ಜವಾಬ್ದಾರಿಯುತ ಪ್ರಜೆಗಳನ್ನಾಗಿ ಮಾಡಿ, ಯಾವುದೇ ಸಾಮಾಜಿಕ ಹಾನಿಕಾರ್ಯದಿಂದ ನಮ್ಮನ್ನು ವಿಮುಖರಾಗಿಸುತ್ತದೆ.

ಈ ರೀತಿ ನಮ್ಮ ವೈಯಕ್ತಿಕತೆಯನ್ನು ಮೀರಿಹೋಗಿ ಮಾನವಕೋಟಿಯೊಂದಿಗೆ, ಇಡೀ ವಿಶ್ವದೊಂದಿಗೆ ಸಮಶ್ರುತಿಯಿಂದ ಬಾಳುವ ಮನೋಭಾವವೇ ಯಜ್ಞದೃಷ್ಟಿ.

## ನಂದಿಸಲಾಗದ ಹಣತೆ

ದೀನಳಾದ ವೃದ್ಧೆಯೊಬ್ಬಳಿದ್ದಳು. ಬುದ್ಧನಿಗೆ ಮತ್ತು ಆತನ ಶಿಷ್ಯರಿಗೆ ಶ್ರೀಮಂತರು ಬಂದು ಬೆಲೆಬಾಳುವ ವಸ್ತುಗಳನ್ನು ಅರ್ಪಿಸುವುದನ್ನು ನೋಡುತ್ತಿದ್ದಳು. ತಾನೂ ಸಹ ಏನನ್ನಾದರೂ ಬುದ್ಧನಿಗೆ ಅರ್ಪಿಸಲು ಸಾಧ್ಯವಾದರೆ ಅದೇ ದೊಡ್ಡ ಸೌಭಾಗ್ಯ ಎಂದು ಭಾವಿಸಿದಳು. ಅದಕ್ಕಾಗಿ ಒಂದು ದಿನವೆಲ್ಲಾ ಸುತ್ತಿ ಸುತ್ತಿ ಇತರರನ್ನು ಬೇಡಿದಳು. ದಿನದ ಕೊನೆಯಲ್ಲಿ ಆಕೆಗೆ ದೊರೆತದ್ದು ಒಂದು ಸಣ್ಣ ನಾಣ್ಯವಷ್ಟೆ. ಅದರಿಂದ ಎಣ್ಣೆ ಕೊಳ್ಳಲೆಂದು ಒಬ್ಬ ಎಣ್ಣೆ ವ್ಯಾಪಾರಿಯ ಹತ್ತಿರ ಹೋದಾಗ ಆತ ಈ ಪುಡಿಕಾಸಿಗೆ ಸ್ವಲ್ಪವೂ ಎಣ್ಣೆ ಸಿಗಲಾರದೆಂದನು. ಆದರೆ ಆ ವೃದ್ಧೆ ಎಣ್ಣೆ ಕೊಳ್ಳುತ್ತಿರುವುದು ಬುದ್ಧನಿಗೆ ಅರ್ಪಿಸುವುದಕ್ಕಾಗಿ ಎಂದರಿತಾಗ, ಆಕೆಗೆ ಕೇಳಿದಷ್ಟು ಎಣ್ಣೆ ಕೊಟ್ಟನು. ವೃದ್ಧೆ ಆ ಎಣ್ಣೆಯನ್ನು ಬುದ್ಧನಿರುವ ವಿಹಾರಕ್ಕೆ ಕೊಂಡೊಯ್ದು ಒಂದು ಹಣತೆಯನ್ನು ಬೆಳಗಿಸಿ ಮನಸ್ಸಿನಲ್ಲಿ ಈ ರೀತಿ ಪ್ರಾರ್ಥಿಸಿದಳು : ' ಹೇ ಪ್ರಭು, ನನ್ನಲ್ಲಿ ಈ ಸಣ್ಣ ಹಣತೆ ಬಿಟ್ಟರೆ ನಿನಗರ್ಪಿಸಲು ಬೇರೇನೂ ಇಲ್ಲ. ಆದರೆ ಈ ನಿವೇದನೆಯಿಂದ ನನ್ನಲ್ಲಿ ಜ್ಞಾನದೀಪ ಬೆಳಗಲಿ. ಆ ದೀಪದಿಂದ ಇತರರನ್ನೂ ಸಹ ಅವರನ್ನಾವರಿಸಿರುವ ಅಂಧಕಾರದಿಂದ ಮುಕ್ತಗೊಳಿಸುವಂತಾಗಲಿ. '

ಆ ರಾತ್ರಿ ಆ ವಿಹಾರದಲ್ಲಿ ಹಚ್ಚಲಾಗಿದ್ದ ಮಿಕ್ಕ ಹಣತೆಗಳಲ್ಲಿ ಎಣ್ಣೆ ತೀರಿ ಅವುಗಳೆಲ್ಲ ಆರಿಹೋದವು. ಆದರೆ ಆ ದೀನ ವೃದ್ಧೆಯ ಹಣತೆ ಮಾತ್ರ ಬೆಳಗಿನ ಜಾವದವರೆಗೂ ಉರಿಯುತ್ತಲೇ ಇತ್ತು. ಬೆಳಗ್ಗೆ ಬುದ್ಧನ ಶಿಷ್ಯ ಮೌದ್ಗಲಾಯನ ಎಲ್ಲ ಹಣತೆಗಳನ್ನು ಸಂಗ್ರಹಿಸಲು ಬಂದಾಗ ಆಗ ತಾನೆ ಹಚ್ಚಿದಂತಿದ್ದ ಆ ವೃದ್ಧೆಯ ಹಣತೆಯನ್ನು ನೋಡಿ, ಅದನ್ನು ನಂದಿಸಲು ಪ್ರಯತ್ನ ಪಟ್ಟನು. ಆದರೆ ಅದು ಉರಿಯುತ್ತಲೇ ಇತ್ತು. ಆ ಹಣತೆ ಆರಲೇ ಇಲ್ಲ. ಪ್ರಕಾಶಮಾನವಾಗಿ ಉರಿಯುತ್ತಿತ್ತು.

ಇದನ್ನೆಲ್ಲಾ ನೋಡುತ್ತಿದ್ದ ಬುದ್ಧ ಆಗ ಮೌದ್ಗಲಾಯನನಿಗೆ, 'ನೀನು ಆ ಹಣತೆಯನ್ನು ನಂದಿಸಲಾರೆ. ಏಕೆ? ಆ ಹಣತೆಯ ಹಿಂದೆ ವೃದ್ಧೆಯೊಬ್ಬಳ ಸರ್ವಸ್ವವೂ — ಪರಿಶುದ್ಧವಾದ ಹೃದಯ ಮತ್ತು ಮನಸ್ಸು ಇದೆ. ಅತ್ಯಂತ ಕಲ್ಯಾಣಕಾರಕವಾಗಿರುವ ಸತ್ಸಂಕಲ್ಪ ಅದರ ಹಿಂದಿದೆ' ಎಂದನು. ಈ ರೀತಿ ನುಡಿಯುತ್ತಿರುವಾಗ ಆ ವೃದ್ಧೆ ಬುದ್ಧನ ದರ್ಶನಕ್ಕಾಗಿ ಬಂದಳು. ಆಕೆಯನ್ನು ಬುದ್ಧ 'ಹಣತೆಯ ಜ್ಯೋತಿ' ಎಂದು ಕರೆದನು. (ಆಧಾರ: Sogyal **Rimpoche, '*The Tibetan Book of Living and Dying*'**)